## ಬೆಂಗಳೂರೆಂಬ ರಾಜ್ಯವೂ ಟೀವಿ ಮಾಧ್ಯಮವೂ

ಕನ್ನಡದ ಸುದ್ದಿ ವಾಹಿನಿಗಳಲ್ಲಿ ಹೊಸ ವರ್ಷಾಚರಣೆ ಲೈವ್ ಪ್ರಸಾರವನ್ನು ಗಂಟೆಗಟ್ಟಲೆ ಮಾಡಲಾಯಿತು. ಅದು ಬೆಂಗಳೂರಿನ ಪ್ರತಿಷ್ಠಿತ ಎಂ.ಜಿ. ರಸ್ತೆ, ಚರ್ಚ್ ಸ್ಟ್ರೀಟ್ ಮತ್ತು ಬ್ರಿಗೇಡ್ ರಸ್ತೆಗಳಿಗೆ ಸೀಮಿತವಾದಂತಿತ್ತು. ಆಗೊಮ್ಮೆ ಈಗೊಮ್ಮೆ ಮೈಸೂರು, ಹುಬ್ಬಳ್ಳಿ, ಬಳ್ಳಾರಿ, ಮಂಗಳೂರು ಮತ್ತು ಶಿವಮೊಗ್ಗ ಸೇರಿ ಕೆಲವು ನಗರಗಳ ಸಂಭ್ರಮವನ್ನು ತೋರಿಸಿದರು. ಆದರೆ ಅದರ ಅವಧಿ ಮಾತ್ರ ತುಂಬ ಸೀಮಿತವಾಗಿತ್ತು. ಬೆಂಗಳೂರು ಮೂಲದ ವಾಹಿನಿಗಳ ಈ ಧೋರಣೆಯಿಂದಾಗಿ ಇತ್ತೀಚಿನ ದಿನಗಳಲ್ಲಿ ಬೆಂಗಳೂರೇತರ ಪ್ರದೇಶಗಳಲ್ಲಿ ಸ್ಥಳೀಯ ಸುದ್ದಿ ವಾಹಿನಿಗಳು ತಲೆ ಎತ್ತುತ್ತಿವೆ. ಕರ್ನಾಟಕವೆಂದರೆ ಕೇವಲ ಬೆಂಗಳೂರಲ್ಲ ಎನ್ನುವ ಸತ್ಯವನ್ನು ಮನಗಾಣಬೇಕಾಗಿದೆ. ಮುದ್ರಣ ಮಾಧ್ಯಮಗಳು ಜಿಲ್ಲಾ ಆವೃತ್ತಿಗಳನ್ನು ಪ್ರಕಟಿಸುತ್ತಿವೆ. ಅದೇ ರೀತಿ ದೃಶ್ಯ ಮಾಧ್ಯಮಗಳು ತಮ್ಮ ಅಸ್ತಿತ್ವಕ್ಕಾದರೂ ಬೆಂಗಳೂರಿನ ಆಚೆ ನೋಡಬೇಕಾಗಿದೆ.

—ರಮಾನಂದ ಶರ್ಮಾ, ಬೆಂಗಳೂರು

## ವಿರಾಟ ಕನ್ನಡ ಪ್ರೀತಿ

ಝೀ ಕನ್ನಡದ 'ಸರಿಗಮಪ'ದ ಸ್ಪರ್ಧಿಗಳಲ್ಲಿ ಅಮೆರಿಕದ 7 ವರ್ಷದ ಬಾಲಕ ವಿರಾಟ್ ಕೂಡ ಒಬ್ಬ. ಆತನ ಕಂಠದ ಮಾಧುರ್ಯ ನಮ್ಮಂತಹ ವೀಕ್ಷಕರ ಮನವನ್ನು ಗೆದ್ದಿದೆ. ಗಾಯನದ ಜೊತೆ ಕನ್ನಡದ ಕವಿಗಳು, ಕರ್ನಾಟಕದ ವಿಶೇಷತೆಗಳನ್ನೂ ಹೇಳುತ್ತಾನೆ. ರಾಷ್ಟ್ರಕವಿ ಕುವೆಂಪು ಅವರ ಜನ್ಮ ದಿನದ ಸಂದರ್ಭದಲ್ಲಿ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳಿಗೆ ಹೋಗಿ ಅಲ್ಲಿನ ಪರಿಸರವನ್ನು ವಿಡಿಯೊ ಮಾಡಿಕೊಂಡು ಬಂದಿದ್ದ. ಆ ವಾರ ಆತ 'ಎಲ್ಲಾದರೂ ಇರು, ಎಂತಾದರೂ ಇರು, ಕನ್ನಡವೇ ಸತ್ಯ' ಎಂಬ ಹಾಡನ್ನು ಹೇಳಿ ಕನ್ನಡ ಪ್ರೀತಿ ಮೆರೆದ ಬಾಲಕನಿಗೆ ಯಶಸ್ಸು ಸಿಗಲಿ.

—ಭಾರತೀ ಗಂಗಾಧರ್, ಬೆಂಗಳೂರು

ವಾರದ ಪತ್ರ



## ಬಿಗ್ ಬಾಸ್ ಮತ್ತು ಜ್ಯೋತಿಷ್ಯ

ಸರ್ವಸಂಗ ಪರಿತ್ಯಾಗಿ ಸ್ವಾಮೀಜಿ ಕಲರ್ಸ್ ಕನ್ನಡದ 'ಬಿಗ್ ಬಾಸ್' ರಿಯಾಲಿಟಿ ಶೋನಲ್ಲಿ ಕಾಣಿಸಿಕೊಂಡಿದ್ದು, ವೀಕ್ಷಕರಲ್ಲಿ ಗಲಿಬಿಲಿಯನ್ನು ಉಂಟುಮಾಡಿತು. ಇದೇ ವೇಳೆ ಕೆಲವು ಸ್ಪರ್ಧಿಗಳಿಗೆ ಭವಿಷ್ಯವನ್ನೂ ಹೇಳಿ ಅವರ ತಲೆಗೆ ಚಿಂತೆಯ ಹುಳವನ್ನು ಬಿಟ್ಟು ಹೋದರು ಎಂದೆನಿಸಿತು. ಅದರಲ್ಲಿ ಮೂವರು ಸ್ಪರ್ಧಿಗಳಿಗೆ ಏನನ್ನೂ ಹೇಳದೆ ಇದ್ದುದಕ್ಕೆ ಕಾರಣ ತಿಳಿಯಲಿಲ್ಲ. ಸಾಮಾನ್ಯವಾಗಿ ಶಾಸ್ತ್ರ ಕೇಳುವುದು ಗೌಪ್ಯದ ವಿಷಯ. ಆಗ ಹೇಳುವವರು ಹಾಗೂ ಕೇಳುವವರು ಮಾತ್ರ ಇರಬೇಕು. ಕಾರಣ ಹಲವು ವೈಯಕ್ತಿಕ ವಿಷಯಗಳನ್ನು ಬಹಿರಂಗವಾಗಿ ಹೇಳಿಕೊಳ್ಳಲು ಸಾಧ್ಯ ಇಲ್ಲ ಎನ್ನುವುದು. ಹೀಗಿರುವಾಗ ಸ್ಪರ್ಧಿ ಡ್ರೋಣ್ ಪ್ರತಾಪ್ ಅವರಿಗೆ 'ನೀನು ನಿನ್ನ ಕುಟುಂಬದವರಿಂದ ದೂರಾಗಬೇಕು' ಎಂದು ಹೇಳಿ ಅವರನ್ನು ಮತ್ತಷ್ಟು ಆತಂಕಕ್ಕೆ ಒಳಗಾಗುವಂತೆ ಮಾಡಿದರು ಎಂದು ಅನಿಸಿತು. ಇದೆಲ್ಲ ವಿದ್ಯಾಶಂಕರಾನಂದ ಅವರು ತಮ್ಮ ಪ್ರಚಾರಕ್ಕೆ ಮಾಡಿಕೊಂಡ ತಂತ್ರ ಎಂದು ಅನ್ನಿಸಿದ್ದು ಸುಳ್ಳಲ್ಲ. ಒಟ್ಟಿನಲ್ಲಿ 'ಬಿಗ್ ಬಾಸ್' ಎಂಬ ಮಾಯೆ ಸ್ವಾಮಿಗಳನ್ನೂ ಬಿಡುವುದಿಲ್ಲ ಎಂದಹಾಗೆ ಆಯಿತು.

—ಸಿಹಿಮೊಗೆ ರಮೇಶ್, ಮೈಸೂರು

## 'ಜ್ಞಾನ ಬುತ್ತಿ' ಮಕ್ಕಳ ಪ್ರತಿಭೆ!



ವಿಶ್ವವಿಖ್ಯಾತ ಬೆಂಗಳೂರು ಕರಗ ಕುರಿತು ಅದ್ಭುತವಾಗಿ ಅಭಿನಯಿಸಿದ ಝೀ ಕನ್ನಡ 'ಡ್ರಾಮಾ ಜ್ಯೂನಿಯರ್ಸ್' ಬಾಲಕಲಾವಿದರು ಪ್ರೌಢಿಮೆಯನ್ನು ಪ್ರದರ್ಶಿಸಿದ್ದಾರೆ. ಮಹಾಭಾರತದ ದ್ರೌಪದಿಯ ಅವತಾರವಾದ ಆದಿಶಕ್ತಿಗೆ ಆರತಿಯೆತ್ತಿ ತೀರ್ಪುಗಾರರಲ್ಲಿ ಒಬ್ಬರಾದ ಲಕ್ಷ್ಮಿಯವರು ಭಕ್ತಿಪೂರ್ವಕ ನಮಿಸಿದರು. ಸಂಭಾಷಣೆ ಮತ್ತು ಅಭಿನಯ ಮನೋಜ್ಞವಾಗಿತ್ತು. ಕರಗೋತ್ಸವದ ಹಿನ್ನೆಲೆಯ ಬಗ್ಗೆ ನೀಡಿದ ವಿವರ ಸಮರ್ಪಕವಾಗಿತ್ತು. ಈ ಬಗ್ಗೆ ಅನೇಕ ವೀಕ್ಷಕರಿಗೆ ಇದ್ದ ಕುತೂಹಲವನ್ನು ತಣಿಸಿದರು ಎಂದು ಅನ್ನಿಸಿತು.

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ

## ನಾಯಕನಿಲ್ಲದ ಧಾರಾವಾಹಿ!

ಕಲರ್ಸ್ ಕನ್ನಡದ 'ಭಾಗ್ಯಲಕ್ಷ್ಮಿ'ಯ ಕ್ರೂರ ನಾಯಕ, ಕೆಟ್ಟ ಗೆಳತಿ, ತಾಯಿಗೆ ಯಾವಾಗಲು ಹೀಯಾಳಿಸುವ ಮಗಳ ಸಂಭಾಷಣೆಯನ್ನು ನೋಡಿದಾಗಲೆಲ್ಲ ಹೀನ ಅಭಿರುಚಿ ಎನಿಸಿದ್ದು ಸುಳ್ಳಲ್ಲ. ಇತ್ತೀಚೆಗೆ ಆ ಕಥೆ ನಾಯಕನೇ ಇಲ್ಲದೆ ಮುನ್ನಡೆಯುತ್ತಿದೆ. ಇದನ್ನು ನೋಡಿದಾಗಲೆಲ್ಲ ಪ್ರೇಕ್ಷಕರ ಸಹನೆಯನ್ನು ದಿನ ದಿನವೂ ಪರೀಕ್ಷಿಸುತ್ತಿದೆ ಎಂದು ಅನ್ನಿಸುತ್ತದೆ.

—ಪಿ.ಎಸ್. ವಿಶ್ವನಾಥ್, ಬೆಂಗಳೂರು

## ಇವರೇನು ರಕ್ಷಕರೊ ಭಕ್ಷಕರೊ

ಕಲರ್ಸ್ ಕನ್ನಡದ 'ರಾಮಾಚಾರಿ'ಯಲ್ಲಿ ಮಾನ್ವಿತಾ ಮಾಡುವ ಕ್ರಿಮಿನಲ್ ಕೆಲಸಕ್ಕೆ ಪೊಲೀಸ್ ಅಧಿಕಾರಿ ಸಹಾಯ ಮಾಡುತ್ತಿರುವುದು ಎಷ್ಟು ಸರಿ. ಅಪರಾಧ ತಡೆಯುವ ಕೆಲಸ ಮಾಡುವುದನ್ನು ಬಿಟ್ಟು ಪುಡಿ ರೌಡಿ ಕೆಲಸವನ್ನು ಮಾನ್ವಿತಾಗೆ ಪರಿಚಯ ಮಾಡಿಸಿಕೊಡುತ್ತಾನೆ. ಅವರ ಉದ್ದೇಶ ಚಾರು ಸಂಸಾರವನ್ನು ಹಾಳು ಮಾಡುವುದು. ಹಣಕ್ಕಾಗಿ ಏನೂ ಬೇಕಾದರೂ ಮಾಡಬಹುದು ಎನ್ನುವ ಅಂಶವನ್ನು ಇಷ್ಟು ಢಾಳಾಗಿ ತೋರಿಸಬಾರದು. ಹೀಗಾದರೆ ಪೊಲೀಸರ ಬಗ್ಗೆ ಸಮಾಜದಲ್ಲಿ ಇನ್ನೂ ಕೆಟ್ಟ ರೂಪ ಅಚ್ಚಾಗುತ್ತದೆ.

—ಮೇಘನಾ ರಘುನಂದನ್, ಹೂವಿನ ಹಡಗಲಿ

## ನಮ್ಮನ್ನು ನಿರಾಳ ಮಾಡಿ



ಝೀ ಕನ್ನಡದ 'ಗಟ್ಟಿ ಮೇಳ' ಧಾರಾವಾಹಿ ಕಳೆದ ಕೆಲವು ವಾರಗಳಿಂದ ತನ್ನ ಹಿಂದಿನ ಛಾಪನ್ನು ಕಳೆದುಕೊಂಡಿದೆ ಎಂದು ಅನ್ನಿಸುತ್ತಿದೆ. ಕಥೆಯಲ್ಲಿ ನೈಜತೆ ಕಾಣದೆ ನೋಡುವ ಕುತೂಹಲ ಕುಂದಿಹೋಗಿದೆ. ನಾಯಕನೇ ಮಾಯವಾಗಿರುವುದು ಅದರ ಖಾಲಿತನವನ್ನು ತೋರಿಸುತ್ತಿದೆ. ಒತ್ತಾಯ ಪೂರ್ವಕವಾಗಿ ಧಾರಾವಾಹಿಯನ್ನು ಮುಂದುವರಿಸುತ್ತಿದ್ದಾರೆ. ಈ ಧಾರಾವಾಹಿ ಬೇಗ ಮುಗಿದರೆ ನಮಗೂ ನಿರಾಳವಾಗುತ್ತದೆ.

—ಎಂ.ಆರ್. ಚಂದ್ರಶೇಖರ್, ಬೆಂಗಳೂರು